**ಓ.ಎಸ್. ನಂಬರ್ : 24/2019**
**ಪಿ .ಡಬ್ಲ್ಯೂ : 2**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ :18.07.2024

**ಮುಂದುವರೆದ ಪಾಟೀ ಸವಾಲು : 1 ರಿಂದ 4 ನೇ ಪ್ರತಿವಾದಿಯ ಪರವಾಗಿ ಶ್ರೀ ಎಮ್.ಈ.ಎಂ ವಕೀಲರಿಂದಃ**

ಮದ್ದೂರಮ್ಮ, ಎ.ಟಿ.ಶಾಮಣ್ಣ, ಎ.ಟಿ.ರಾಜು ರವರು ಯಾವ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಗಳು ನನ್ನ ಬಳಿ ಇವೆ. ನನ್ನ ತಂದೆ ತೀರಿಕೊಂಡ ನಂತರ ನಾನು ಈ ದಾವೆ ಯಲ್ಲಿ ಪಕ್ಷಗಾರನಾಗಿ ಬಂದ ನಂತರ ನಾವು ವಾದ ಪತ್ರದಲ್ಲಿ ಈ ಮೇಲೆ ಹೇಳಿದಂತೆ ಮದ್ದೂರಮ್ಮ, ಎ.ಟಿ.ಶಾಮಣ್ಣ, ಎ.ಟಿ.ರಾಜು ರವರು ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ. ನಾವು ವಾದ ಪತ್ರದಲ್ಲಿ ಈ ಮೇಲೆ ಹೇಳಿದಂತ ಮದ್ದೂರಮ್ಮ, ಎ.ಟಿ.ಶಾಮಣ್ಣ, ಎ.ಟಿ.ರಾಜು ರವರು ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳಿಲ್ಲ ಅಂದರೆ ಹೌದು.

ನಿಪಿ-8 ರ ದಾಖಲೆಯನ್ನು ನಟೇಶ್ ರವರು ಪಡೆದುಕೊಂಡಿರುತ್ತಾರೆ. ನಾನು ಈ ದಾವೆಯಲ್ಲಿ ಪಕ್ಷಗಾರನಾಗಿ ಬಂದ ನಂತರ ಮದ್ದೂರಮ್ಮನವರ ಕುಟುಂಬದ ವಂಶ ವೃಕ್ಷವನ್ನು ಸ್ವತಃ ಪಡೆದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ಸಾಕ್ಷಿ ಮುಂದುವರೆದು ತಂದೆಯವರು ನೀಡಿದ ದಾಖಲೆ ಕಡತದಲ್ಲಿ ಇದ್ದ

ಕಾರಣ ಅದನ್ನೇ ಮುಂದುವರೆಸಿಕೊಂಡು ಹೋಗಿರುತ್ತ್ೇನೆ ಎಂದು ನುಡಿಯುತ್ತಾರೆ. ನಿಪಿ-8 ರ ದಾಖಲೆಯನ್ನು ನನ್ನ ತಂದೆ ಅವರ ಅನುಕೂಲಕ್ಕೆ ತಕ್ಕಂತೆ ತಯಾರಿಸಿಕೊಂಡಿರುತ್ತಾರೆ ಅಂದರೆ ಸುಳ್ಳು. ನಿಪಿ-8 ರ ದಾಖಲೆಯನ್ನು ಕಂದಾಯ ಇಲಾಖೆಯಿಂದ ಪಡೆದಂತಹ ದಾಖಲೆ ಅಲ್ಲ ಅಂದರೆ ತಪ್ಪು.

ನಿಪಿ-9 ರ ದಾಖಲೆಯಲ್ಲಿ ನನ್ನ ತಂದೆಯ ಹೆಸರಿದೆ. ನನ್ನ ತಂದೆಯವರು ನಿಪಿ-9 ರ ದಾಖಲೆಯನ್ನು ಹೇಗೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸಾಕ್ಷಿ ಗೊತ್ತಿದೆ ಎಂದು ನುಡಿಯುತ್ತಾರೆ. ನಿಪಿ-9 ರ ದಾಖಲೆಯನ್ನು ಪಡೆದುಕೊಳ್ಳಲು ಯಾವ ಪೂರಕವಾದ ದಾಖಲೆಯನ್ನು ಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಿಪಿ-9 ರ ದಾಖಲೆಯ ಪ್ರಕಾರ ಮುನಿಸ್ವಾಮಿಯವರಿಗೆ ನನ್ನ ತಂದೆ ಜಯಶೀಲ ಒಬ್ಬರೇ ಮಗ ಆ ಸಮಯದಲ್ಲಿ ಜೀವಂತ ಇರುತ್ತಾರೆ ಎಂದು ನಮೂದಿಸಿರುತ್ತಾರೆ ಅಂದರೆ ಸಾಕ್ಷಿ ಮುನಿಸ್ವಾಮಿಯ 3 ನೇ ಹೆಂಡತಿ ಎಸ್.ಕಮಲಮ್ಮ ರವರಿಗೆ ಒಬ್ಬನೇ ಮಗ ಇದ್ದು ಅವರ ಹೆಸರೇ ಜಯಶೀಲ ಆದ್ದರಿಂದ ಜಯಶೀಲ ರವರ ಹೆಸರು ಮಾತ್ರ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-9 ರ ದಾಖಲೆಯಲ್ಲಿ ನನ್ನ ತಂದೆ ಯ ತಂಗಿ ಲಲಿತಾಂಗಿ ರವರ ಹೆಸರನ್ನು ಕೂಡ ನಮೂದಿಸಿಲ್ಲ ಅಂದರೆ ಅವರಿಗೆ ತಂಗಿಯೇ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-9 ರ ದಾಖಲೆಯನ್ನು ಕೂಡ ನನ್ನ ತಂದೆ ಸೃಷ್ಟಿ ಮಾಡಿಕೊಂಡು ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ.

ನಿಪಿ-14 ರಲ್ಲಿ ಸರ್ವೆ ನಂಬರ್ 135/1 ರ 66 ಸೆಂಟ್ಸ್ ಜಾಗದ ಬಗ್ಗೆ

ನಮೂದು ಮಾಡಿರುತ್ತಾರೆ. ಸರ್ವೆ ನಂಬರ್ 135/1 ರ 66 ಸೆಂಟ್ಸ್ ಜಾಗ ಈಗ ನಮ್ಮ ಸ್ವಾಧೀನದಲ್ಲಿದೆ. ನಾವು ಸದರಿ ಜಾಗವನ್ನು ಖರೀದಿ ಮಾಡಿರುತ್ತೇವೆ. ನನ್ನ ತಂದೆ ಮತ್ತು ಅಜ್ಜಿ 1990 ರಲ್ಲಿ ಖರಿದಿ ಮಾಡಿರುತ್ತಾರೆ. ದಿನಾಂಕ ತಿಂಗಳು ನಿಖರವಾಗಿ ನೆನಪಿಲ್ಲ. ನನ್ನ ತಂದೆ ಮತ್ತು ಅಜ್ಜಿ ಎ.ಟಿ. ರಾಜುರವರಿಂದ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರ ನನ್ನ ಬಳಿ ಇದೆ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪತ್ರದಲ್ಲಿ ನನ್ನ ತಂದೆ ಮತ್ತು ಅಜ್ಜಿ 1990 ರಲ್ಲಿ ಎ.ಟಿ. ರಾಜು ರವರಿಂದ ಸರ್ವೆ ನಂಬರ್ 135/1 ರ 66 ಸೆಂಟ್ಸ್ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ. ಸದರಿ ಕ್ರಯ ಪತ್ರವನ್ನು ನಾವು ಹಾಜರುಪಡಿಸಿಲ್ಲ ಕಾರಣ ಸದರಿ ಆಸ್ತಿಯನ್ನು ನಾವು ಈ ದಾವೆಯಲ್ಲಿ ಸೇರಿಸಿಲ್ಲ. 1990 ರ ಪೂರ್ವದಲ್ಲಿ ನನ್ನ ಅಜ್ಜಿ ಮತ್ತು ಅವರ ಮಕ್ಕಳ ನಡುವೆ ವಿಭಾಗ ಆಗಿತ್ತು ಅಂದರೆ ಇಲ್ಲ.

ಸದರಿ ಆಸ್ತಿಯ ಜಮಾಬಂಧಿ ಎ.ಟಿ ರಾಜುರವರ ಹೆಸರಿನಲ್ಲಿ ಬರುತ್ತಿತ್ತು ಅಂದರೆ ಹೌದು. ನನ್ನ ತಂದೆ ಮತ್ತು ಅಜ್ಜಿ ಯ ಪಾಲಿನ ಆಸ್ತಿಯನ್ನು ಅವರ ಹಿಸ್ಸೆ ಗೆ ನೀಡಲು ಕಾನೂನು ತೊಡಕು ಅಂದರೆ ತುಂಡು ಭೂಮಿ ಕಾಯ್ದೆ (ಕರ್ನಾಟಕ ಪ್ರಿವೆನ್ಷನ್ ಆಫ್ ಪ್ರಾಗ್ಮೆಂಟೇಷನ್ ಅಂಡ್ ಕನ್ಸಾಲ್ಡೇಷನ್ ಆಫ್ ಹೋಲ್ಡಿಂಗ್ಸ್ ಆಕ್ಟ್ 1966) ಅಡಿ ಯಲ್ಲಿ ತೊಡಕು ಇದ್ದ ಕಾರಣ ನನ್ನ ತಂದೆ ಮತ್ತು ಅಜ್ಜಿಯ ಸ್ವಾಧೀನಕ್ಕೆ ಸದರಿ 66 ಸೆಂಟ್ಸ್ ಜಾಗವನ್ನು 08.01.1990 ರಂದು ಕ್ರಯ ಪತ್ರದ ಮುಖಾಂತರ ಬರೆದುಕೊಡಲಾಗಿತ್ತು ಅಂದರೆ ಸುಳ್ಳು. ಸರ್ವೆ

ನಂಬರ್ 135/1 ರ 6 ಎಕರೆ 47 ಸೆಂಟ್ಸ್ ಜಾಗದಲ್ಲಿ ಮದ್ದೂರಮ್ಮನವರು ಮಾರಾಟ ಮಾಡಿ ಉಳಿದ ಜಾಗವು ಸಮಾನವಾಗಿ ಅವರ 3 ಜನ ಗಂಡು ಮಕ್ಕಳಿಗೂ ಪಾಲಾಗಿರುತ್ತದೆ ಅಂದರೆ ಸುಳ್ಳು. ಸದರಿ ವಿಭಾಗದಲ್ಲಿ ಮುನಿಸ್ವಾಮಿಯವರ ಪಾಲಿಗೆ ಬಂದಂತಹ 2 ಎಕರೆ ಜಮೀನಿನಲ್ಲಿ 3 ಜನ ಹೆಂಡತಿಯರ ಭಾಗಕ್ಕೆ 66 ಸೆಂಟ್ಸ್ ನಂತೆ ಹಂಚಿಕೆ ಮಾಡಲಾಗಿತ್ತು ಅಂದರೆ ಸುಳ್ಳು. ಆ ಸಮಯದಲ್ಲಿ ಇದ್ದಂತಹ ತುಂಡು ಭೂಮಿ ಹಿಡುವಳಿ ಬಗ್ಗೆ ಇದ್ದಂತಹ ಕಾನೂನು ತೊಡಕಿನ ಲಾಭವನ್ನು ಪಡೆದು ನಾವು ಸದರಿ ಜಮೀನನ್ನು ಖರಿದಿ ಮಾಡಿದ ಜಮೀನು ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ

ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
*ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,*
*ಸೋಮವಾರಪೇಟೆ.*